ನಾಟಕವಾಡುತ್ತಾಳೆ. ಅವಳಿಗೂ ನಾನು ಬೇಕು. ಆದರೆ ನಾನು ಬಯಸಿದ ರೀತಿಯಿಂದಲ್ಲ. ನನಗೂ ಅವಳು ಬೇಕು. ಅವಳು ಆಶಿಸುವ ಮಾದರಿಯಲ್ಲಲ್ಲ. ಎರಡು ಬೇಕುಗಳು ಒಂದು ಬೇಡವಾಗಿ ಪರಿವರ್ತನೆಯಾಗುವ ಕ್ರಿಯೆ ಯಾತನಾಮಯ. ಅದು ಖಿನ್ನತೆಯ ಮಡುವೊಳಗೆ ನನ್ನನ್ನು ನೂಕುತ್ತಿದೆಯೆಂತಲೂ ಅನಿಸಹತ್ತಿತ್ತು. ಇಬ್ಬರಿಗೂ ಬೇಕಿರುವಾಗ ಯಾರಾದರೊಬ್ಬರು ನಮ್ಮ ಸಿದ್ಧಾಂತವನ್ನು ಬದಲಿಸಿಕೊಂಡರೆ ಈ ಸಮಸ್ಯೆಗೊಂದು ಶಾಶ್ವತ ಪರಿಹಾರ ಸಿಗಬಹುದೆನಿಸಿತು. ಅವಳು ಬದಲಾಗುವುದು ಸುಲಭೋಪಾಯವೆಂತಲೂ ಎನಿಸಿತು. ಒಂದು ವಾರಾಂತ್ಯ ಅವಳ ರೂಮಿಗೆ ಹೋಗಿ ತುಂಬ ಗಂಭೀರವಾಗಿ,

'ಯಾಕೆ ನಮ್ಮ ನಡುವೆ ಹೀಗಾಗುತ್ತಿದೆ? ನಿನಗೆ ನನ್ನ ಮೇಲೆ ಇಷ್ಟು ಪ್ರೇಮವಿದ್ದರೂ, ನನಗೆ ನಿನ್ನ ಮೇಲೆ ಇಷ್ಟು ಮೋಹವಿದ್ದರೂ ನಾವಿಬ್ಬರೂ ಇನ್ನು ಹತ್ತಿರವಾಗಿಲ್ಲ. ನಮ್ಮ ಗೆಳೆತನ ಎಲ್ಲಿಂದ ಆರಂಭವಾಯ್ತೋ ಅಲ್ಲೇ ಇದೆ. ಈ ಕುರಿತು ನಾವಿಬ್ಬರೂ ಏನಾದರೊಂದು ತೀರ್ಮಾನ ತೆಗೆದುಕೊಳ್ಳಬಾರದೇಕೆ?' ಎಂದೆ.

'ಯಾವ ಬಗೆಯ ತೀರ್ಮಾನ? ನೀನೇನಾದರೂ ನಿನ್ನ ನಿಲುವು ಬದಲಾಯಿಸಿ ನನ್ನನ್ನು ಮದುವೆಯಾಗುವೆಯಾ ಹೇಗೆ?' ಎಂದಳು ಕಾತುರದಿಂದ...

'ಇಲ್ಲ ನಾನು ಹಾಗೆಂದುಕೊಂಡಿಲ್ಲ. ನೀನೇ ಏಕೆ ನಿನ್ನ ನಿಲುವಿನಿಂದ ಕೆಳಗಿಳಿಯಬಾರದು? ನಾವಿಬ್ಬರು ಇನ್ನು ಒಂದು ಒಂದೂವರೆ ವರ್ಷಗಳಷ್ಟು ಕಾಲ ಇಲ್ಲಿ ಒಟ್ಟಿಗಿರುತ್ತೇವೆ. ನಂತರ ನಮ್ಮಿಬ್ಬರ ದಾರಿಗಳು ಬದಲಾಗುತ್ತವೆ. ಪ್ರಾಯಶಃ ನಾವಿಬ್ಬರೂ ಆಮೇಲೆ ಇಡೀ ಜೀವನ ಭೇಟಿಯಾಗದೆಯೇ ಇರಬಹುದು. ಆ ಮೇಲೆ ಎಷ್ಟೇ ಆಸೆ ಪಟ್ಟರು ನಾವಿಬ್ಬರೂ ಒಂದು ಬಾರಿಯೂ ಜೊತೆಗೂಡಲಿಲ್ಲ ಎಂದು ನೊಂದುಕೊಳ್ಳಬಾರದಲ್ಲ ಆದ್ದರಿಂದ' ಎಂದೆ ನಿಧಾನವಾಗಿ.

'ಇಲ್ಲ ಸಾಧ್ಯವಿಲ್ಲ, ನನ್ನ ಮೇಲೆ ನಿನಗೆ ಪ್ರೇಮ ಹುಟ್ಟುವವರೆಗೆ ನಿನ್ನ ಮೇಲೆ ನನಗೆ ಮೋಹ ಹುಟ್ಟುವುದಿಲ್ಲ. ಪ್ರೇಮ ಮೋಹಗಳ ತಕ್ಕಡಿಯ ಬಟ್ಟಲುಗಳು ಸಮನಾಗಿ ತೂಗುವುದಿಲ್ಲ. ಮೋಹ ಮುಗಿದ ಮೇಲೂ ಪ್ರೇಮ ಉಳಿಯುತ್ತದೆ. ನಿನಗಿದು ಅರ್ಥವಾಗುವವರೆಗೆ ನಮ್ಮಿಬ್ಬರ ನಡುವೆ ಏನೂ ಘಟಿಸುವುದಿಲ್ಲ. ನಾವು ಎಲ್ಲಿದ್ದೇವೋ ಅಲ್ಲಿಯೇ ಇನ್ನು ಬಹುಕಾಲ ಇರಬೇಕಾಗುತ್ತದೆ' ಎಂದಳು. 'ಪ್ರೇಮದ ಕುರಿತು ನಿನ್ನ ಭ್ರಮೆಗಳು ಬಹಳವಾಗಿವೆ. ಒಂದು ಬಾರಿ ಹತ್ತಿರವಾದ ಮೇಲೆ ಎಲ್ಲಾ ಕುತೂಹಲ, ಆಕರ್ಷಣೆ ಮುಗಿದು ಹೋಗುತ್ತದೆ. ಪ್ರಕೃತಿಯಲ್ಲಿ ಎಲ್ಲವು ಬದಲಾಗುತ್ತಿರುತ್ತದೆ. ನಾವು ಮಾಡುವ ಊಟ, ತೊಡುವ ಬಟ್ಟೆ, ಉಪಯೋಗಿಸುವ ವಸ್ತುಗಳೆಲ್ಲ ಪ್ರತಿದಿನ ಬದಲಾಗುವಾಗ ಕಾಮ ಸಂಬಂಧಕ್ಕೆ ಯಾಕೆ ಎಲ್ಲೂ ಇಲ್ಲದ ಏಕತಾನತೆ? ಸಹಜವಾಗಿ ಪ್ರಕೃತಿಯೊಂದಿಗೆ ಪ್ರಕೃತಿಯಾಗುವುದೇ ಸರಿ ಎಂದು ನಿನಗನಿಸುವುದಿಲ್ಲವೇ?' ಎಂದೆ. 'ಇಲ್ಲ, ನೀನು ಮಾತಾಡುತ್ತಿರುವುದು ಕಾಮದ ಕುರಿತು. ನಾನು ಹೇಳುತ್ತಿರುವುದು ಅದಕ್ಕಿಂತ ಶ್ರೇಷ್ಠವಾದ ಪ್ರೇಮದ ಕುರಿತು. ಕಟ್ಟಿಕೊಳ್ಳುವ ಬದುಕಿನಲ್ಲಿ ಎಲ್ಲೂ ಭಾವ ಬಂಧನಗಳೇ ಬೇಡವೆಂದರೆ... ಅಂತಹ ಬದುಕು ನಮ್ಮದಲ್ಲವೆನ್ನಿಸುತ್ತದೆ. ಕಡೆಗೆ ಕೈಬಿಚ್ಚಿ ನೋಡಿದರೆ ಖಾಲಿ ಖಾಲಿ ಇರುತ್ತದೆ. ನಮ್ಮದೆನುವುದು ಏನೂ ಉಳಿದಿರುವುದಿಲ್ಲ. ಅಂತಹ ಬದುಕು ನನ್ನ ಆಯ್ಕೆಯೂ ಅಲ್ಲ. ಅಗತ್ಯವು ಅಲ್ಲ. ಪದೇಪದೇ ಇಂತಹುದನ್ನು ನನ್ನ ಬಳಿ ಪ್ರಸ್ತಾಪಿಸಬೇಡ. ಮತ್ತೆ ಮತ್ತೆ ನನ್ನ ಹೃದಯಕ್ಕೆ ಬರೆ ಹಾಕಿದಂತೆ ಆಗುತ್ತದೆ' ಎಂದಳು ಗಂಭೀರವಾಗಿ.

ಯಾಕೋ ಎಲ್ಲವು ನಿರುತ್ಸಾಹದಾಯಕ, ನೀರಸವೆನಿಸಿತು. ಇವಳು ಪರಿಭಾವಿಸುವ